ರಾಜ್ಯದ ಪ್ರದೇಶಾಭಿವೃದ್ಧಿಗಳ ವಿಚಾರದ ಕುರಿತು.

588(736)

ಶ್ರೀ ಎ.ನಾರಾಯಣಸ್ವಾಮಿ(ಆನೇಕಲ್): ಮಾನ್ಯ ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಪ್ರದೇಶಾಭಿವೃದ್ಧಿಗಳ ಸಂಖ್ಯೆ ಎಷ್ಟು, ಅವು ಯಾವುವು?

ಆ) ಇವುಗಳ ಜೊತೆಯಲ್ಲಿ ಕರಾವಳಿ ಪ್ರದೇಶಾಭಿವೃದ್ಧಿಗಳೆಂದು ವಿಂಗಡಣೆ ಮಾಡಿ ಆ ಭಾಗಗಳ ಅಭಿವೃದ್ಧಿಗೆ ಹೆಚ್ಚಿನ ನೆರವು ನೀಡಲು ಸರ್ಕಾರ ಉದ್ದೇಶಿಸಿದೆಯೇ?

ಇ) ಬಯಲುಸೀಮೆ ಪ್ರದೇಶಾಭಿವೃದ್ಧಿ ವ್ಯಾಪ್ತಿಯಲ್ಲಿ ಬರುವ ಜಿಲ್ಲೆ ಹಾಗೂ ತಾಲ್ಲೂಕುಗಳ ವಿವರ ನೀಡುವುದು ಹಾಗೂ ಬೆಂಗಳೂರು ಜಿಲ್ಲೆ ಆನೇಕಲ್ ತಾಲ್ಲೂಕನ್ನು ಈ ಮಂಡಳಿ ವ್ಯಾಪ್ತಿಗೆ ಸೇರ್ಪಡೆಗೊಳಿಸಿಲ್ಲದಿರುವುದು ನಿಜವೇ: ಕಾರಣವೇನು;

ಈ) ಆನೇಕಲ್ ಕ್ಷೇತ್ರವನ್ನು ಈ ಮಂಡಳಿ ವ್ಯಾಪ್ತಿಗೆ ಸೇರಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಉ) ಸದರಿ ಮಂಡಳಿಯ ವತಿಯಿಂದ ಬಿಡುಗಡೆಯಾಗುವ ಅನುದಾನದ ಬಗ್ಗೆ ತಾಲ್ಲೂಕುವಾರು ವಿವರ ನೀಡುವುದು?

ಶ್ರೀ ಬಿ. ರಮಾನಾಥ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು):

ಅ) 1) ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿ ಚಿತ್ರದುರ್ಗ

2) ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಶಿವಮೊಗ್ಗ

3) ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿ, ಗುಲ್ಬರ್ಗಾ

ಆ) ಇಲ್ಲ.

ಇ) ವಿವರಗಳನ್ನು ಅನುಬಂಧ 1ರಲ್ಲಿ ನೀಡಿದೆ. ವ್ಯಾಪ್ತಿಗೆ ಸೇರ್ಪಡೆ ಮಾಡುವ ಬಗ್ಗೆ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ

ಊ) ಪ್ರತೀ ವಿಧಾನಸಭಾ ಕ್ಷೇತ್ರಕ್ಕೆ ರೂ.2.40 ಲಕ್ಷಗಳು ಲಭ್ಯವಾಗಲಿದೆ.

ಅನುಬಂಧ - 1

ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯಲ್ಲಿ ಒಟ್ಟು 12 ಜಿಲ್ಲೆ ಹಾಗೂ 57 ತಾಲ್ಲೂಕು (76 ವಿಧಾನಸಭಾ ಕ್ಷೇತ್ರಗಳು) ಬರುತ್ತವೆ. ಹಾಗೂ ಅವುಗಳ ವಿವರ ಈ ಕೆಳಕಂಡಂತೆ ನೀಡಲಾಗಿದೆ.

ಕ್ರ. ಸಂ.	ಜಿಲ್ಲೆಯ ಹೆಸರು	ವಿಧಾನಸಭಾ ಕ್ಷೇತ್ರಗಳ ಹೆಸರು
1.	ಬೆಂಗಳೂರು (ಗ್ರಾಮಾಂತರ) :	1. ಚನ್ನಪಟ್ಟಣ 2. ದೇವನಹಳ್ಳಿ 3. ಕನಕಪುರ 4. ಸಾತನೂರು 5. ರಾಮನಗರ 6. ದೊಡ್ಡ ಬಳ್ಳಾಪುರ 7. ನೆಲಮಂಗಲ 8. ಹೊಸಕೋಟೆ 9. ಮಾಗಡಿ
2.	ತುಮಕೂರು	: 10. ತುಮಕೂರು 11. ಬೆಳ್ಳಾವಿ 12. ಗುಬ್ಬಿ 13. ಕೊರಟಗೆರೆ 14. ಪಾವಗಡ 14. ಮಧುಗಿರಿ 16. ಚಿಕ್ಕನಾಯ್ಕನಹಳ್ಳಿ 17. ಶಿರಾ 18. ಕಳ್ಳಂಬೆಳ್ಳ 19. ತಿಪಟೂರು 20. ತುರುವೇಕೆರೆ 21. ಕುಣಿಗಲ್ 22. ಹುಲಿಯೂರುದುರ್ಗ
3.	ಕೋಲಾರ	: 23. ವೇಮಗಲ್ 24. ಕೋಲಾರ 25. ಬೇತಮಂಗಲ 26. ಮುಳಬಾಗಲು 27. ಶ್ರೀನಿವಾಸಪುರ 28. ಬಾಗೇಪಲ್ಲಿ 29. ಶಿಡ್ಲಘಟ್ಟ 30. ಚಿಕ್ಕಬಳ್ಳಾಪುರ 31. ಚಿಂತಾಮಣಿ 32. ಮಾಲೂರು
4.	ಹಾಸನ	: 33. ಅರಿಸೀಕೆರೆ 34. ಗಂಡಸಿ
5.	ಚಿತ್ರದುರ್ಗ	: 35. ಚಿತ್ರದುರ್ಗ 36. ಭರಮಸಾಗರ 37. ಹೊಳಲ್ಕೆರೆ 38. ಹೊಸದುರ್ಗ 39. ಹಿರಿಯೂರು 40. ಚಳ್ಳಕೆರೆ 41. ಮೊಳಕಾಲ್ಮೂರು
6.	ದಾವಣಗೆರೆ	: 42. ಜಗಳೂರು

7.	ಧಾರವಾಡ	: 43. ಹುಬ್ಬಳ್ಳಿ (ನಗರ) 44. ಹುಬ್ಬಳ್ಳಿ(ಗ್ರಾಮ) 45. ಕಲಘಟಗಿ 46.ಕುಂದಗೋಳ
8.	ಗದಗ	: 47. ಗದಗ 48. ರೋಣ 49. ಶಿರಹಟ್ಟಿ 50. ಮುಂಡರಗಿ 51. ನರಗುಂದ
9.	ಹಾವೇರಿ	: 52. ರಾಣೆಬೆನ್ನೂರು 53. ಹಾವೇರಿ 54. ಬ್ಯಾಡಗಿ
10.	ಬೆಳಗಾಂ	: 55. ರಾಮದುರ್ಗ 56. ಚಿಕ್ಕೋಡಿ 57. ನಿಪ್ಪಾಣಿ 58. ಸದಲಗಾ 59. ಹುಕ್ಕೇರಿ 60.ಗೋಕಾಕ್ 61.ಅರಬಾವಿ 62. ಅಥಣಿ 63. ಕಾಗವಾಡ
11.	ಬಿಜಾಪುರ	: 64. ಬಿಜಾಪುರ 65.ತಿಕೋಟ 66.ಬಸವನಬಾಗೇವಾಡಿ 67. ಹೂವಿನ ಹಿಪ್ಪರಗಿ 68. ಇಂಡಿ 69. ಬಳ್ಳೊಳ್ಳಿ 70. ಸಿಂಧಗಿ 71. ಮುದ್ದೆಬಿಹಾಳ
12.	ಬಾಗಲಕೋಟೆ	: 72. ಬಾಗಲಕೋಟೆ 73. ಬಾದಾಮಿ 64. ಗುಳೇದಗುಡ್ಡ 76. ಬೀಳಗಿ 76. ಹುನಗುಂದ